ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಬೆಳೆ ಸಾಲಕ್ಕೆ ದಾವೆ.

1062 (1824): ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):–

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರದ ಬೆಳೆ ಉತ್ಪಾದನೆ ಯೋಜನೆ ಕೆಳಿದ 1992ರ ಮಾರ್ಚ್ ನಂತರ ಜೂನ್‌ವರೆಗೆ ಜಾರಿಯಲ್ಲಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಾಗ್ಯೂ ಜನವರಿ, ಫೆಬ್ರವರಿ ತಿಂಗಳಲ್ಲಿ ತಿಪಟೂರು ಉಪ ವಿಭಾಗದಲ್ಲಿ ಅದರಲ್ಲೂ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಾಲ ಪಡೆದ ಸದಸ್ಯರ ಮೇಲೆ ದಾವಾ ಹಾಕುವ ಕ್ರಮ ಕೈಗೊಳ್ಳಲು ಕಾರಣವೇನು;

ಇ. ಇದರಿಂದಾಗಿ ಜನರಿಗೆ ಸರ್ಕಾರದ ಹಾಗೂ ಸಂಘದ ಬಗ್ಗೆ ಅವಿಶ್ವಾಸ ತಲೆದೋರಲಿಲ್ಲವೇ;

ಈ. ಇಂತಹ ಅನುಚಿತ ವರ್ತನೆ ಮಾಡಿದ ಅಧಿಕಾರಿಗಳ ಮೇಲೆ ಕಾನೂನಿನ ಕ್ರಮ ಕೈಗೊಳ್ಳುವಿರಾ, ದಾವಾ ವಜಾ ಮಾಡಿ ಹಣ ಕಟ್ಟಲು ಆದೇಶ ನೀಡುವಿರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ಹೌದು, ಮತ್ತು ಅದು ಜುಲೈ 1992ರವರೆಗೆ ಜಾರಿಯಲ್ಲಿತ್ತು.

ಆ. ಯೋಜನೆಯನ್ನು ಜಾರಿಯಲ್ಲಿ ತಂದಾಗ್ಯೂ ಕೂಡ ರೈತರು ಸಾಲ ಮರುಪಾವತಿ ಮಾಡದೇ ಇದ್ದ ಸಂದರ್ಭದಲ್ಲಿ ಉಪಯೋಗಿಸಲೆಂದು ಜನವರಿ, ಫೆಬ್ರವರಿ ತಿಂಗಳಲ್ಲಿ ದಾವಾ ಹಾಕಲಾಗಿತ್ತು.

ಇ. ಇಲ್ಲ.

ಈ. ಉದ್ಭವಿಸುವುದಿಲ್ಲ.

ಸಹಕಾರ ಇಲಾಖೆಯಲ್ಲಿ ನಿರೀಕ್ಷಕರುಗಳಿಗೆ ಭಡ್ತಿ.

1063 (1922): ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ):–

ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸಹಕಾರ ಇಲಾಖೆಯಲ್ಲಿ ನಿರೀಕ್ಷಕರುಗಳಿಗೆ ಎಷ್ಟೆಷ್ಟು ವರ್ಷಗಳಿಗೆ ಬಡ್ತಿ ನೀಡಲಾಗುತ್ತಿದೆ (ಪ್ರೊಮೋಷನ್);

ಆ. ಈ ಪೈಕಿ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ನಿರೀಕ್ಷಕರುಗಳೆಷ್ಟು;

ಇ. ನಿರೀಕ್ಷಕರುಗಳಾಗಿ ಎಷ್ಟೆಷ್ಟು ವರ್ಷಗಳಿಂದ ಒಂದೇ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದಾರೆ;

ಈ. ರೋಸ್ಟರ್ ಪಿಸ್ಟಂ ರೀತ್ಯಾ ಈ ನಿರೀಕ್ಷಕರುಗಳಿಗೆ ಪ್ರಮೋಷನ್ ನೀಡಲಾಗುತ್ತಿದೆಯೇ;

ಉ. 1975ರಲ್ಲಿ ಸೇರಿದ ನಿರೀಕ್ಷಕರು (ಪರಿಶಿಷ್ಟ ಜಾತಿ)ಗಳಿಗೆ ಪ್ರೊಮೋಷನ್ ನೀಡಿಲ್ಲ ಏಕೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ. ನಿರೀಕ್ಷಕರ ಹುದ್ದೆಯಲ್ಲಿ ಕನಿಷ್ಟ 6 ವರ್ಷಗಳ ಅರ್ಹತಾ ಸೇವೆ ಸಲ್ಲಿಸಿದ್ದಲ್ಲಿ, ಒಂದು ವೇಳೆ 6 ವರ್ಷಗಳ ಸೇವೆ ಸಲ್ಲಿಸದ ನಿರೀಕ್ಷಕರುಗಳು ಇದ್ದಲ್ಲಿ ಕನಿಷ್ಟ 6 ವರ್ಷಗಳ ಅರ್ಹತಾ ಸೇವೆಯನ್ನು 3